ಪಿ.ಡಬ್ಲ್ಯೂ1 ಸಿ. ಸಿ.ನಂ.3690/2021

ದಿನಾಂಕಃ 10-01-2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀಸವಾಲು ಆರೋಪಿ ಪರ ವಕೀಲರಾದ ಶ್ರೀ ವಿ ಸ್ ಪರ ಶ್ರೀ ಎ ಆರ್ ವಕೀಲರಿಂದಃ

ನಾನು ಸುಮಾರು 28 ವರ್ಷಗಳಿಂದ ಅಂಗನವಾಡಿ ಕಾರ್ಯಕರ್ತೆಯಾಗಿ ಕೆಲಸ ಮಾಡುತ್ತಿದ್ದೇನೆ. ಜೂನ್ ಮೊದಲನೇ ವಾರದಲ್ಲಿ ಹಣ ಕೊಟ್ಟಿರುತ್ತೇನೆ. ಹಣವನ್ನು ನಾನು ಮನೆಯಲ್ಲಿ ಕೊಟ್ಟಿರುತ್ತೇನೆ. ಆ ದಿನ ನಾನು ಕೆಲಸಕ್ಕೆ ಹೋಗಿರುತ್ತೇನೆ. ರಜಾ ಹಾಕಿರುವುದಿಲ್ಲ. ಆರೋಪಿಗೆ ಹಣ ಕೊಡುವಾಗ ಸಂಜೆ 7 ಗಂಟೆಯಾಗಿರುತ್ತದೆ. ಆರೋಪಿ ಜೊತೆ ಯಾರೂ ಬಂದಿರುವುದಿಲ್ಲ. ಸರ್ಕಾರದಿಂದ ನಿಮಗೆ ಯಾವುದೇ ಸಂಬಳ ಬರುವುದಿಲ್ಲ ಎಂದರೆ ಬರುವುದಿಲ್ಲ ಅಂಗನವಾಡಿಯ ಗೌರವಧನ ಬರುತ್ತದೆ. ನನಗೆ ತಿಂಗಳಿಗೆ 12 ಸಾವಿರ ಬರುತ್ತದೆ. ಆ ಸಂಬಳ ಬಿಟ್ಟು ನಿಮಗೆ ಬೇರೆ ಏನೂ ಆದಾಯ ಇರುವುದಿಲ್ಲ ಎಂದರೆ ಮನೆ ಬಾಡಿಗೆ ಬರುತ್ತದೆ ಮಕ್ಕಳು ದುಡಿಯುತ್ತಾರೆ. ಟ್ಯಾಂಕ್ ಬಂಡ್ ರಸ್ತೆಯಲ್ಲಿ ಬಾಡಿಗೆ ಕೊಟ್ಟಿರುತ್ತೇನೆ. ಆ ಮನೆಗಳು ನನ್ನ ಹೆಸರು ಮತ್ತು ನನ್ನ ಮಕ್ಕಳ ಹೆಸರಿಗೆ ಇದ್ದು ಅದರ ಬಗ್ಗೆ ದಾಖಲೆ ಕೊಟ್ಟಿರುವುದಿಲ್ಲ.

ಟಪಾಲು ಸುರೇಶ್ ಎನ್ನುವವರು ನಿಮಗೆ ಪರಿಚಯ ಎಂದರೆ ಪರಿಚಯ ಇರುವುದಿಲ್ಲ. ನನ್ನ ಮಕ್ಕಳಿಗೆ ಮದುವೆಯಾಗಿರುವುದಿಲ್ಲ. ಆ ದಿನ ನಿಮ್ಮ ಬಳಿ 5 ಲಕ್ಷ ಇತ್ತು ಎಂದು ತೋರಿಸಲು ದಾಖಲೆ ಇತ್ತ ಎಂದರೆ ಮನೆಯಲ್ಲಿ ಹಣ ಇಟ್ಟುಕೊಂಡಿರುತ್ತೇನೆ. ಆರೋಪಿ ಬೆಂಗಳೂರಿನಲ್ಲಿ ಕೆಲಸ ಮಾಡುತ್ತಾರೆ ಎಂದರೆ ಸರಿ. ಆರೋಪಿ ಸುಮಾರು 7-8 ವರ್ಷದಿಂದ ಪರಿಚಯಸ್ಥರಿರುತ್ತಾರೆ. ನನ್ನ ಮಗನ ಸ್ನೇಹಿತನಿರುತ್ತಾರೆ. ಚೇತನ್ ಕುಮಾರ್ ಮತ್ತು ಪ್ರವೀಣ್ ರವರ ಸ್ನೇಹಿತರಿರುತ್ತಾರೆ. ಹಣ ಕೊಟ್ಟಾಗ ಚೆಕ್ ಕೊಟ್ಟಿರುತ್ತಾರೆ ಸಾಕ್ಷಿ ಮುಂದುವರಿದು ಜೂನ್ ನಲ್ಲಿ ಹಣ ಕೊಟ್ಟಿದ್ದು ಅಗಸ್ಟ್ ತಿಂಗಳಲ್ಲಿ ಚೆಕ್ ಕೊಟ್ಟಿರುತ್ತಾರೆ. ಯಾವ ಬ್ಯಾಂಕ್ ಚೆಕ್ ಎಂದರೆ ಸ್ಟೇಟ್ ಬ್ಯಾಂಕ್ ಚೆಕ್ ಕೊಟ್ಟಿದ್ದು ಚೆಕ್ ನಂ. 212292. ಆರೋಪಿಗೆ ನೀವು 5 ಲಕ್ಷ ರೂ

ಹಣವನ್ನು ಕೊಟ್ಟಿರುವುದಿಲ್ಲ ಹಾಗೂ 5 ಲಕ್ಷ ರೂ ಕೊಡುವ ಸಾಮರ್ಥ್ಯ ಇಲ್ಲ ಎಂದರೆ ಸರಿಯಲ್ಲ.

ವಕೀಲರ ಮೂಲಕ ಆರೋಪಿಗೆ ನೋಟೀಸು ಕಳುಹಿಸಿರುತ್ತೇನೆ. ಆ ನೋಟೀಸು ಆರೋಪಿಗೆ ಜಾರಿಯಾಗಿದೆಯೋ ಇಲ್ಲವೋ ಎಂಬುದನ್ನು ನಮ್ಮ ವಕೀಲರಿ ಮೂಲಕ ತಿಳಿದುಕೊಂಡಿರುವುದಿಲ್ಲ. ಯಾವ ವಿಳಾಸಕ್ಕೆ ನೀವು ಆರೋಪಿಗೆ ನೋಟೀಸು ಕಳುಹಿಸಿರುತ್ತೀರಿ ಎಂದರೆ ಆರೋಪಿ ಮನೆಗೆ ಮತ್ತು ಕೆಲಸ ಮಾಡುವ ವಿಳಾಸಕ್ಕೆ ಬೆಂಗಳೂರಿನಲ್ಲಿ ಯಾವ ವಿಳಾಸಕ್ಕೆ ನೋಟೀಸು ಕಳುಹಿಸಿರುತ್ತೀರಿ ಎಂದರೆ ವಿಳಾಸ ಸರಿಯಾಗಿ ಗೊತ್ತಿರುವುದಿಲ್ಲ. ಜೂನ್ 2021 ರ 2 ನೇ ವಾರದಲ್ಲಿ ಕರೋನಾ ಪ್ರಯುಕ್ತ ಲಾಕ್ ಡೌನ್ ಆಗಿತ್ತು ಎಂದರೆ ಆಗಿತ್ತು. ಆ ಸಮಯದಲ್ಲಿ ಯಾರೂ ಓಡಾಡಬಾರದು ಎಂದು ಸರ್ಕಾರದಿಂದ ಆದೇಶ ಇತ್ತು ಎಂದರೆ ಸರಿ. ಆರೋಪಿಗೆ ಯಾವುದೇ ನೋಟೀಸು ಜಾರಿಯಾಗಿರುವುದಿಲ್ಲ ನೀವು ಸುಳ್ಳು ಸಾಕ್ಷ್ಯ ನುಡಿಯುತ್ತೀರಿ ಎಂದರೆ ಆರೋಪಿ ಇರುವ ಮನೆಗೆ ಕಳುಹಿಸಿರುತ್ತೇನೆ. ನೀವು ಕಳುಹಿಸಿರುವ ನೋಟೀಸಿನಲ್ಲಿ ಸಹಿಯನ್ನು ಮಾಡಿ ಕಳುಹಿಸಿರುತ್ತೀರಾ ಎಂದರೆ ಸಹಿ ಮಾಡಿ ಕಳುಹಿಸಿರುತ್ತೇನೆ. ಅದನ್ನು ನ್ಯಾಯಾಲಯಕ್ಕೆ ಕೊಟ್ಟಿರುತ್ತೀರಾ ಎಂದರೆ ನಮ್ಮ ವಕೀಲರಿಗೆ ಕೊಟ್ಟಿರುತ್ತೇನೆ. ನಿಮಗೆ 12 ಸಾವಿರ ಸಂಬಳ ಬರುತ್ತದೆ ಎಂಬುದಕ್ಕೆ ನ್ಯಾಯಾಲಯಕ್ಕೆ ದಾಖಲೆ ಕೊಟ್ಟಿರುತ್ತೀರಾ ಎಂದರೆ ಕೊಟ್ಟಿರುವುದಿಲ್ಲ.

ಮುಂದುವರಿದ ಪಾಟೀಸವಾಲಿಗೆ ಸಮಯ ಕೋರಿದ್ದು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ,

ಪ್ರಧಾನ ಸಿ.ನ್ಯಾ ಮತ್ತು ಜೆ.ಎಂ.ಎಫ್.ಸಿ.,
ಚಿಂತಾಮಣಿ.